# ಹಳೆಯ ನಾಣ್ಯಗಳು

ಕೆಲವೇ ವರ್ಷಗಳ ಹಿಂದೆ ಚಲಾವಣೆಯಲ್ಲಿದ್ದ ಈ ನಾಣ್ಯಗಳು ಈಗ ಚಲಾವಣೆಯಿಂದ ಹಿಂದೆ ಸರಿದಿವೆ. ಚಿಲ್ಲರೆ ಬೇಕಾಗುತ್ತದೆ ಎಂದು ಇಟ್ಟುಕೊಂಡ ಈ ನಾಣ್ಯಗಳು ಈಗ ಹೊರಗೆ ಬಂದಿವೆ. ಬೆಲೆ ಇದ್ದಾಗ ಅವಿತುಕೊಂಡ ಇವು, ಈಗ ತಮ್ಮ ಬೆಲೆಯನ್ನೇ ಕಳೆದುಕೊಂಡಿವೆ. ಈಗ ಇವುಗಳಿಗೆ ಇರುವುದು 'ಆ್ಯಂಟಿಕ್ ವ್ಯಾಲ್ಯೂ'. ಪ್ರಾಚೀನ ನಾಣ್ಯಗಳ ಸಂಗ್ರಹಕಾರರು ಇವುಗಳಿಗೆ ಬೆಲೆ ಕೊಟ್ಟು ಕೊಳ್ಳುತ್ತಾರೆ. ನೈಜ ಬೆಲೆಗಿಂತ ಹೆಚ್ಚಿಗೇ ಕೊಟ್ಟು ಕೊಳ್ಳಬಹುದು. ನಾಣ್ಯಗಳು ಹಳೆಯದಾದಷ್ಟೂ ಅವುಗಳ ಮೌಲ್ಯ ಕೂಡ ಹೆಚ್ಚುತ್ತ ಹೋಗುತ್ತದೆ. ಹಳೆಯ ನಾಣ್ಯಗಳು ಎಂದು ನಿರ್ಲಕ್ಷ್ಯ ಮಾಡಿ ಎಸೆದು ಬಿಡಬೇಡಿ.

**ಚಿತ್ರ-ಬರಹ: ಸುಭಾಸ ಯಾದವಾಡ, ವಿಜಯಪುರ**





# ಕೇಸರಿಭಾತ್ ತೊಳಸುಗೋಲು

ಉತ್ತರಕನ್ನಡದ ಹವ್ಯಕ ಸಮುದಾಯದಲ್ಲಿ ಅನ್ನದ ಕೇಸರಿಭಾತ್ ಎಂಬ ಸಿಹಿ ತಿನಿಸು ಬಹಳ ಜನಪ್ರಿಯ. ಸ್ಥಳೀಯವಾಗಿ ಬೆಳೆಯುವ ಪರಿಮಳ ಬೀರುವ ಗಂಧಸಾಲೆ ಅಕ್ಕಿ(ಸಣ್ಣಕ್ಕಿ)ಯಿಂದ ಮಾಡಿದ ಅನ್ನ, ತುಪ್ಪ, ಸಕ್ಕರೆ, ಅಪ್ಪಟ ಕೇಸರಿ ದಳ, ದ್ರಾಕ್ಷಿ, ಗೋಡಂಬಿಯಂತಹ ಒಣ ಹಣ್ಣುಗಳನ್ನು ಧಾರಾಳವಾಗಿ ಬಳಸಿ ತಯಾರಿಸುವ ಈ ರುಚಿಕರ ತಿನಿಸಿಗೆ ಮದುವೆ, ಮುಂಜಿಯಂತಹ ವಿಶೇಷ ಸಂದರ್ಭಗಳಲ್ಲಿ ಅಗ್ರ ಸ್ಥಾನ.

ಉರಿಯುವ ಒಲೆಯ ಮೆಲಿಟ್ಟ ದೊಡ್ಡ ಕಡಾಯಿಯಲ್ಲಿ ಎಲ್ಲಾ ಪದಾರ್ಥಗಳನ್ನು ಹಾಕಿ ಚೆನ್ನಾಗಿ ಅಂಟು ಬಂದು ತುಪ್ಪ ಬಿಡುವವರೆಗೆ ಮಿಶ್ರ ಮಾಡಬೇಕು. ಹಾಗೆ ತಿರುಗಿಸಲು ತುದಿ ಚಪ್ಪಟೆಯಿರುವ ಮರದ ಈ ಉದ್ದನೆಯ ಕೋಲನ್ನು ಬಳಸುವ ರೂಢಿಯಿದೆ. ಹಿತ್ತಾಳೆ, ಸ್ಟೀಲ್ ಸಲಕರಣೆಗಳ ಈ ಕಾಲದಲ್ಲೂ ಕೇಸರಿಭಾತ್ ತಯಾರಿಸಲು ಮಾತ್ರ ಈ ಮರದ ಕೋಲೇ ಉಪಯೋಗಕ್ಕೆ ಬರುತ್ತದೆ. ಬಹುತೇಕ ಹವ್ಯಕ ಕುಟುಂಬಗಳಲ್ಲಿ ಈಗಲೂ ಈ ಕೋಲನ್ನು ಕಾಣಬಹುದು.

**ಚಿತ್ರ- ಬರಹ: ಉಷಾ ದಿವಾಕರ ಹಲಗೇರಿ, ಸಿದ್ದಾಪುರ**

# ಕಲ್ಲಿನ ಕೊಡೆ

ಗಂಗ, ಚೋಳ, ಹೊಯ್ಸಳ, ಪಲ್ಲವ, ಮತ್ತು ವಿಜಯನಗರ ಅರಸರ ಆಳ್ವಿಕೆಗಳಲ್ಲಿ ನಿರ್ಮಾಣ ಹಾಗೂ ವಿಸ್ತರಣೆಗೊಂಡ ಭೋಗ ನಂದೀಶ್ವರ ದೇವಾಲಯದ ಸುಂದರ ಕಲ್ಲಿನ ಕೆತ್ತನೆಗಳು ಅಭೂತಪೂರ್ವ. ಸುಮಾರು ಒಂದು ಸಾವಿರ ವರ್ಷಗಳ ಇತಿಹಾಸವುಳ್ಳ ಬೃಹತ್ ದೇಗುಲದಲ್ಲಿನ ಸಹಸ್ರಾರು ಶಿಲ್ಪಗಳಲ್ಲಿ ಅಪರೂಪವೆನಿಸಿದ್ದು ಆವರಣದಲ್ಲಿ ಕಡೆದು ನಿಲ್ಲಿಸಿರುವ ಕಲ್ಲಿನ ಕೊಡೆ. ಸುಂದರ ಕುಸುರಿ ಕೆತ್ತನೆಗಳಿಂದ ಅಲಂಕೃತವಾದ ಈ ಕಲ್ಲಿನ ಕೊಡೆಯು ಸುಮಾರು ಐದಾರು ಅಡಿ ವ್ಯಾಸ ಮತ್ತು ಹನ್ನೆರಡು ಅಡಿ ಎತ್ತರವಿದ್ದು ಆಕರ್ಷಕವಾಗಿದೆ. ಆಲಯದ ಮೂಲ ದೇವರಿಗಾಗಿ ಕಲ್ಲಿನಲ್ಲಿ ಕೊಡೆಯನ್ನು ಕಡೆಯಬೇಕೆಂಬ ಶಿಲ್ಪಿಯ ಆಶಯವೇ ಅದ್ಭುತವೆನಿಸಿತು. ಅಂದ ಹಾಗೆ ಈ ದೇವಸ್ಥಾನವಿರುವುದು ಬೆಂಗಳೂರು ಸಮೀಪದ ನಂದಿ ಬೆಟ್ಟದ ಬುಡದಲ್ಲಿ.

**-ಮಂಜುನಾಥ ಡಿ.ಎಸ್., ಬೆಂಗಳೂರು**

